1	2	3	4	5
18.	ಕೊಡಗು	ಮಡಿಕೇರಿ	56.	ನಾಪೋಕ್ಲು
19.	ಕೋಲಾರ	ಬಂಗಾರುಪೇಟೆ	57.	ಕೆ.ಜಿ.ಎಫ್.
		ಚಿಂತಾಮಣಿ	58.	ಗಡಿಗವಾರಪಲ್ಲಿ
		ಶ್ರೀನಿವಾಸಪುರ	59.	ಸೋಸಯಾಜಲಪಲ್ಲಿ
20.	ಕೊಪ್ಪಳ	ಗಂಗಾವತಿ	60.	ಸಿದ್ದಾಪುರ
21.	ಮಂಡ್ಯ	ಮಳವಳ್ಳಿ	61.	ಕಿರುಗಾವಲು
			62.	ಬಾಚನಹಳ್ಳಿ
		ಮಂಡ್ಯ	63.	ತಂಗಳಗೆರೆ
		ನಾಗಮಂಗಲ	64.	ಕೋಟೆಬೆಟ್ಟ
		ಶ್ರೀರಂಗಪಟ್ಟಣ	65.	ಶ್ರೀರಂಗಪಟ್ಟಣ
22.	ಮೈಸೂರು	ಮೈಸೂರು	66.	ದೊಡ್ಡಹುಂಡಿ
		ನಂಜನಗೂಡು	67.	ಎಸ್. ಹೊಸಕೋಟೆ
23.	ರಾಯಚೂರು	ದೇವದುರ್ಗ	68.	ಜಾಲಹಳ್ಳಿ
		ಲಿಂಗಸಗೂರು	69.	ಆಡವಿಭಾವಿ
		ರಾಯಚೂರು	70.	ರಾಯಚೂರು
24.	ಶಿವಮೊಗ್ಗ	ಭದ್ರಾವತಿ	71.	ಅನವೇರಿ
		ಶಿಕಾರಿಪುರ	72.	ಶಿರಾಳಕೊಪ್ಪ
		ಶಿವಮೊಗ್ಗ	73.	ಮೇಲಿನ ಹನಸವಾಡಿ
25.	ತುಮಕೂರು	ಮಧುಗಿರಿ	74.	ಕುಪ್ಪಕಾರಿ ರೊಪ್ಪ
26.	ಉಡುಪಿ	ಉಡುಪಿ	75.	ಬ್ರಹ್ಮಾವರ
27.	ಉತ್ತರ ಕನ್ನಡ	ಮುಂಡಗೋಡು	76.	ಮುಂಡಗೋಡು
		ಯಲ್ಲಾಪುರ	77.	ಮಾಗೋಡು ಫಾಲ್ಸ್

ಚಿಂತಾಮಣಿ ನಗರದ ಒಳಚರಂಡಿ ವ್ಯವಸ್ಥೆ

792 (831) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರವು ಅಭಿವೃದ್ಧಿಯಾಗಿದ್ದು ಇಲ್ಲಿ ಅನೇಕ ಹೊಸ ಬಡಾವಣೆಗಳು ನಿರ್ಮಾಣವಾಗಿದ್ದು ಈ ಹೊಸ ಪ್ರದೇಶಗಳಲ್ಲಿ ಒಳಚರಂಡಿ ಇಲ್ಲದಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಳಚರಂಡಿ ಯೋಜನೆ ಇಲ್ಲದಿದ್ದಲ್ಲಿ ನೈರ್ಮಲ್ಯ ಕೆಟ್ಟು ಜನರ ಆರೋಗ್ಯಕ್ಕೆ ಧಕ್ಕೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯೋಜಿಸುತ್ತದೆಯೋ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ಬಂದಿದೆ

ಇ) ಚಿಂತಾಮಣಿ ನಗರದಲ್ಲಿ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಎರಡನೇ ಹಂತದಲ್ಲಿ ಬಾಗೇಪಲ್ಲಿ ರಸೆಂ ರೈಲ್ವೆಸ್ಟೇಷನ್ ರಸ್ತೆ, ಶ್ರೀನಿವಾಸಪುರ ರಸ್ತೆಗಳಲ್ಲಿ ಶಿಟ್‌ಹಾಲ್ ಸಿವರ್ ಹಾಗೂ ನಗರದ ಹೊಸ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹಕ್ಕಿ ಪಿಕ್ಕಿಗಳ ಕಾಲೋನಿಯ ರಸ್ತೆ ಅಭಿವೃದ್ಧಿ

793 (834) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿಯಲ್ಲಿ ಹಕ್ಕಿ ಪಿಕ್ಕಿ ಕಾಲೋನಿ ಗ್ರಾಮಕ್ಕೆ ಗುಂಡ್ಲುಹಳ್ಳಿಯಿಂದ ರಸ್ತೆ ಮಾಡಲು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾದ ಹಣವೆಷ್ಟು?

ಆ) ಈ ಕಾಮಗಾರಿಯು ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಆ ಗ್ರಾಮದ ಹಕ್ಕಿ-ಪಿಕ್ಕಿ ಜನಾಂಗಕ್ಕೆ ಬಹಳ ತೊಂದರೆಗೊಳಗಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಈ ಕಾಮಗಾರಿಗೆ ಈಗಾಗಲೇ ಎಷ್ಟು ಹಣ ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಮತ್ತು ಪೂರ್ಣಗೊಳಿಸಲಾದ ಕಾಮಗಾರಿ ಕೆಲಸವೆಷ್ಟು; (ವಿವರ ನೀಡುವುದು)